# All India Radio: Bangalore
# National Bulletin In Kannada
# 10.10.2026 1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**10.10.2026 1.10 p.m.**

**<><><><>**

ಮುಖ್ಯಾಂಶಗಳು

1. ತಂತ್ರಜ್ಞಾನ ಅಳವಡಿಕೆಯೊಂದಿಗೆ ಆಧುನಿಕ ಪಡೆಯಾಗಿ ಭಾರತೀಯ ವಾಯುಪಡೆ ಪರಿವರ್ತನೆ - ರಕ್ಷಣಾ ಸಚಿವ ರಾಜನಾಥ್ ಸಿಂಗ್
2. ನೆರೆ ರಾಷ್ಟ್ರಗಳ ಪರಮಾಣು ಬೆದರಿಕೆಗಳಿಗೆ ಅಂಜುವುದಿಲ್ಲ; ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನಕ್ಕೆ ಭಾರತದಿಂದ ನೇರ ಉತ್ತರ
3. ರಷ್ಯಾ ಮೂಲದ ಡೀಸೆಲ್ ಆಮದು ಮೇಲಿನ ನಿರ್ಬಂಧ ಸಡಿಲಿಸಿದ ಅಮೆರಿಕ
4. ಸಿಜೆಪಿ ಪ್ರತಿಭಟನೆ: ಮುನ್ನೆಚ್ಚರಿಕಾ ಕ್ರಮವಾಗಿ ೨೦೦ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದ ದೆಹಲಿ ಪೊಲೀಸ್
5. ಇದೇ ೧೨ರಂದು ಅಹಮದಾಬಾದ್‌ನಲ್ಲಿ ಬ್ರಿಕ್ಸ್ ಸಾಂಪ್ರದಾಯಿಕ ಮತ್ತು ದೇಶೀಯ ಕ್ರೀಡೆಗಳ ಪ್ರದರ್ಶನ ಪಂದ್ಯಾವಳಿ ಆಯೋಜನೆ

<><><><>

ರಾಜಸ್ಥಾನದ ಜೋಧ್‌ಪುರ ವಾಯುಪಡೆ ನಿಲಾಣದಲ್ಲಿ ಇಂದು ನಡೆದ 'ತರಂಗ್ ಶಕ್ತಿ ೨೦೨೫' ಬಹುರಾಷ್ಟ್ರೀಯ ವಾಯುಸೇನಾ ಕವಾಯತಿನ ಪ್ರಮುಖ ಕಾರ್ಯಕ್ರಮಗಳಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ರಕ್ಷಣಾ ವಲಯದಲ್ಲಿ ಆತ್ಮನಿರ್ಭರತೆ, ರಾಷ್ಟ್ರೀಯ ನೀತಿಯ ಅಡಿಪಾಯವಾಗಿದೆ. ಯಾವುದೇ ದೇಶ ಸಂಕಷ್ಟದ ಸಮಯದಲ್ಲಿ ತನ್ನದೇ ಆದ ಶಸ್ತ್ರಾಸ್ತ್ರ ಮತ್ತು ತಂತ್ರಜ್ಞಾನ ಸಾಮರ್ಥ್ಯ ಹೊಂದಿಲ್ಲದಿದ್ದರೆ ಸುದೀರ್ಘ ಯುದ್ಧ ಎದುರಿಸಲು ಸಾಧ್ಯವಿಲ್ಲ. ಈ ದೃಷ್ಟಿಕೋನದಿಂದ ಭಾರತೀಯ ಸಶಸ್ತ್ರ ಪಡೆಗಳು, ಮಹತ್ವದ ಕಾರ್ಯತಂತ್ರ ಪರಿವರ್ತನೆಗೆ ಒಳಪಡುತ್ತಿವೆ ಎಂದರು. ಇಂದು ಭಾರತೀಯ ವಾಯುಪಡೆ, ನಿಖರ ಶಸ್ತ್ರಾಸ್ತ್ರ, ಸುಧಾರಿತ ರಾಡಾರ್ ಮತ್ತು ವಿದ್ಯುನ್ಮಾನ ವ್ಯವಸ್ಥೆಗಳೊಂದಿಗೆ ಆಧುನಿಕ ಪಡೆಯಾಗಿ ಹೊರಹೊಮ್ಮಿದೆ. ತೇಜಸ್, ರುದ್ರ, ಪ್ರಚಂಡ್ ಸೇರಿದಂತೆ ಮತ್ತಿತರ ಯುದ್ಧ ವಿಮಾನ, ಹೆಲಿಕಾಪ್ಟರ್

ಹಾಗೂ ಆಕಾಶ್ ಕ್ಷಿಪಣಿ ನಿರೋಧಕ ವ್ಯವಸ್ಥೆಗಳು, ದೇಶದ ರಕ್ಷಣಾ ಉತ್ಪಾದನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ◌ಂದು ತಿಳಿಸಿದರು. ಸೆಪ್ಟೆಂಬರ್ ೨೬ ರಿಂದ ಅಕ್ಟೋಬರ್ ೧೨ ರವರೆಗೆ ನಡೆಯುತ್ತಿರುವ ಈ ಸಮರಾಭ್ಯಾಸವು, ಭಾಗವಹಿಸುತ್ತಿರುವ ವಿವಿಧ ದೇಶಗಳ ವಾಯುಪಡೆಗಳ ನಡುವೆ ಕಾರ್ಯಾಚರಣೆಯ ಸಹಕಾರ, ಪರಸ್ಪರ ಸಹಯೋಗ ಮತ್ತು ಸಾಮರಸ್ಯವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

<><><>

ಹದಿಹರೆಯದ ಹೆಣ್ಣು ಮಕ್ಕಳ ಆರೋಗ್ಯ, ಪೋಷಣೆ ಮತ್ತು ಸರ್ವಾಂಗೀಣ ವಿಕಸನದತ್ತ ಹೆಚ್ಚಿನ ಗಮನಹರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕುರಿತ ಎರಡು ದಿನಗಳ ರಾಷ್ಟ್ರೀಯ ಇಲಾಖಾ ಶೃಂಗಸಭೆಯ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣಕ್ಕಾಗಿ ಮಕ್ಕಳಿಗೆ ಸೂಕ್ತವಾದ ಜಾಗೃತಿ ಪಠ್ಯಕ್ರಮಗಳನ್ನು ರೂಪಿಸುವಂತೆ ಪ್ರಧಾನಿ ಸಲಹೆ ನೀಡಿದರು. ಸ್ಥಳೀಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಜಿಲ್ಲಾ, ನಗರಸಭೆ ಹಾಗೂ ಮಹಾನಗರ ಪಾಲಿಕೆ ಮಟ್ಟದಲ್ಲಿ ಚಿಂತನ ಶಿಬಿರ ಆಯೋಜಿಸುವಂತೆ ರಾಜ್ಯಗಳಿಗೆ ಸೂಚಿಸಿದರು.

<><><>

ಯಾವುದೇ ರೀತಿಯ ಭಯೋತ್ಪಾದನಾ ದಾಳಿ ಎದುರಾದರೂ ಭಾರತ ತಕ್ಕ ಪ್ರತ್ಯುತ್ತರ ನೀಡಲಿದ್ದು, ನೆರೆ ರಾಷ್ಟ್ರದ ಪರಮಾಣು ಬೆದರಿಕೆಗಳಿಗೆ ಅಂಜುವುದಿಲ್ಲ ಎಂದು ಭಾರತ, ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ. ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆ ಮಹಾಸಭೆಯ ಮೊದಲ ಸಮಿತಿ ಸಭೆಯಲ್ಲಿ ಜಿನಿವಾದಲ್ಲಿ ನಿಶಸ್ತ್ರೀಕರಣ ಕುರಿತ ವಿಶ್ವಸಂಸ್ಥೆ ಸಮ್ಮೇಳನದ ಭಾರತದ ಕಾಯಂ ಮಿಷನ್‌ನ ಹಿರಿಯ ಸಲಹೆಗಾರ ಅನ್ಮೋಲ್ ಶೇರ್ ಬೇಡಿ ಮಾತನಾಡಿ, ಭಯೋತ್ಪಾದನೆಗೆ ಪ್ರಾಯೋಜಕತೆ ನೀಡುವ ಮತ್ತು ಅದರ ರೂವಾರಿಗಳನ್ನು ಭಾರತ ಒಂದೇ ರೀತಿ ಪರಿಗಣಿಸಲಿದ್ದು, ಭಯೋತ್ಪಾದನೆ ವಿರುದ್ಧ ಯಾವುದೇ ರಾಜಿ ಇಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

<><><>

ಜಾಗತಿಕ ಮಾರುಕಟ್ಟೆಯಲ್ಲಿನ ಇಂಧನ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯ ಮತ್ತು ಡೀಸೆಲ್ ಬೆಲೆಯಲ್ಲಿನ ತೀವ್ರ ಏರಿಕೆ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ

ವ್ಲಾಡಿಮಿರ್ ಪುಟಿನ್ ನಡುವಿನ ಮಾತುಕತೆಯ ನಂತರ ಅಮೆರಿಕ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ರಷ್ಯಾ ಮೂಲದ ಡೀಸಲ್, ಇಂಧನದ ಮಾರಾಟ ಹಾಗೂ ಆಮದು ಮೇಲಿನ ನಿರ್ಬಂಧಗಳನ್ನು ೨೦೨೭ರ ಏಪ್ರಿಲ್ ೭ರ ವರೆಗೆ ತಾತ್ಕಾಲಿಕವಾಗಿ ಸಡಿಲಿಸಲಾಗಿದೆ. ಕಳೆದ ರಾತ್ರಿ ಈ ಕುರಿತು ಅಧಿಕೃತ ಘೋಷಣೆ ಮಾಡಿರುವ ಅಮೆರಿಕ, ರಷ್ಯಾದ ಡೀಸೆಲ್, ಇಂಧನದ ಮಾರಾಟ, ವಿತರಣೆ ಮತ್ತು ಅಮೆರಿಕಾಗೆ ನೇರ ಆಮದು ಮಾಡಿಕೊಳ್ಳುವಿಕೆಗೆ ಸಂಬಂಧಿಸಿದ ವ್ಯವಹಾರಗಳಿಗೆ ಅನುಮತಿ ನೀಡಿ, ಆದೇಶ ಹೊರಡಿಸಿದೆ.

<><><><>

ದೆಹಲಿಯಲ್ಲಿ ಸಿಜೆಪಿ ಪಕ್ಷ ಹಮ್ಮಿಕೊಳ್ಳಲು ಉದ್ದೇಶಿಸಿರುವ ಪ್ರತಿಭಟನೆ ಹಿನ್ನೆಲೆಯಲ್ಲಿ ದೆಹಲಿ ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ಜಂತರ್ ಮಂತರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಸುಮಾರು ೨೦೦ ಜನರನ್ನು ವಶಕ್ಕೆ ಪಡೆದಿದ್ದಾರೆ. ಸಿಜೆಪಿ ನಯಕ ಅಭಿಜಿತ್ ದೀಪ್‌ಕೆ, ಪ್ರಮುಖ ವಕ್ತಾರರಾದ ಸೌರವ್ ದಾಸ್ ಮತ್ತು ಅಶುತೋಷ್ ರಂಕ, ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮರುಕ್ಷಣವೇ ವಶಕ್ಕೆ ತೆಗೆದುಕೊಂಡಿದ್ದಾರೆ. ಇದೇ ವೇಳೆ ಗುರ್‌ಗಾಂವ್‌ನಲ್ಲಿರುವ ನಿವಾಸದಲ್ಲಿದ್ದ ಸಾಮಾಜಿಕ ಜಾಲತಾಣ ಪ್ರಭಾವಿ ಧ್ರುವ್ ರಾಥಿ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರತಿಭಟನೆ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ದೆಹಲಿ ಗಡಿಗಳಲ್ಲಿ ವಾಹನಗಳ ತೀವ್ರ ತಪಾಸಣೆ ನಡೆಸಲಾಗುತ್ತಿದೆ.

<><><><>

ಇಂದು, 'ವಿಶ್ವ ಮಾನಸಿಕ ಆರೋಗ್ಯ ದಿನ. ಪ್ರತಿ ವ? ಅಕ್ಟೋಬರ್ ೧೦ ರಂದು ಆಚರಿಸಲಾಗುವ 'ವಿಶ್ವ ಮಾನಸಿಕ ಆರೋಗ್ಯ ದಿನ'ವನ್ನು, ೧೯೯೨ ರಲ್ಲಿ 'ವರ್ಲ್ಡ್ ಫೆಡರೇಶನ್ ಫಾರ್ ಮೆಂಟಲ್ ಹೆಲ್ತ್' ಮೊದಲ ಬಾರಿಗೆ ಪ್ರಾರಂಭಿಸಿತು. ಮಾನಸಿಕ ಆರೋಗ್ಯ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ವಿಶ್ವಾದ್ಯಂತ ಮಾನಸಿಕ ಆರೋಗ್ಯ ಸೇವೆಯನ್ನು ಬೆಂಬಲಿಸುವ ಪ್ರಯತ್ನಗಳನ್ನು ಕ್ರೋಢೀಕರಿಸುವುದು ಈ ಜಾಗತಿಕ ಆಚರಣೆಯ ಉದ್ದೇಶವಾಗಿದೆ. ಈ ದಿನದ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ, ಎಲ್ಲರಿಗೂ ಸುಲಭವಾಗಿ ದೊರೆಯುವ, ಕೈಗೆಟುಕುವ ಹಾಗೂ ಜನ-ಕೇಂದ್ರಿತ

ಮಾನಸಿಕ ಆರೋಗ್ಯ ಸೇವೆಯನ್ನು ಒದಗಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

<><><><>

'ಜನ ಸೇವೆಯೇ ದೇಶ ಸೇವೆ' ಎಂಬ ಮಂತ್ರದಡಿ ಹಾಗೂ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ ಕೂಡಿರುವ ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ '೨೦೨೫ರ ವಕ್ಫ್ ಸುಧಾರಣೆಗಳ ಕುರಿತ ಒಂದು ವರದಿ ಇಲ್ಲಿದೆ. ಈ ಹಿಂದೆ ವಕ್ಫ್ ಕಾಯ್ದೆಯ ಸೆಕ್ಷನ್ ೪೦ರಡಿ ವಕ್ಫ್ ಮಂಡಳಿಗೆ ಯಾವುದೇ ಆಸ್ತಿಯನ್ನು ಸ್ವಯಂ ನಿರ್ಧಾರದ ಮೂಲಕ ವಕ್ಫ್ ಆಸ್ತಿ ಎಂದು ಘೋಷಿಸುವ ಅಧಿಕಾರವಿತ್ತು. ಇದರಿಂದಾಗಿ ನೋಂದಾಯಿತ ವಕ್ಫ್ ಆಸ್ತಿಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳ ಕಂಡುಬಂದಿತ್ತು. ೨೦೧೩ರಲ್ಲಿ ೨.೦೭ ಲಕ್ಷ ಇದ್ದ ಈ ಆಸ್ತಿಗಳ ಸಂಖ್ಯೆ ೮.೭೨ ಲಕ್ಷಕ್ಕೆ ತಲುಪಿದೆ. ಈ ಪೈಕಿ ಸರ್ಕಾರಿ ಸ್ವಾಮ್ಯದ ೫ ಸಾವಿರದ ೯೭೩ ಆಸ್ತಿಗಳೂ ಸೇರಿರುವುದು ಗಂಭೀರ ಚಿಂತನೆಗೆ ಕಾರಣವಾಗಿತ್ತು.  ಈ ಲೋಪದೋಷಗಳನ್ನು ಸರಿಪಡಿಸಲು ಜಾರಿಗೆ ತರಲಾಗಿರುವ ವಕ್ಫ್ ತಿದ್ದುಪಡಿ ಕಾಯ್ದೆ ೨೦೨೫ಅನ್ನು ಉಮೀದ್ ಕಾಯ್ದೆ ಎಂದು ಕರೆಯಲಾಗುತ್ತದೆ. ಈ ಹೊಸ ಕಾಯ್ದೆ, ವಕ್ಫ್ ಮಂಡಳಿಗೆ ಏಕಪಕ್ಷೀಯ ಅಧಿಕಾರ ನೀಡುತ್ತಿದ್ದು, ನಿಬಂಧನೆಯನ್ನು ಸಂಪೂರ್ಣವಾಗಿ ತೆಗೆದುಹಾಕಿದೆ. ಇನ್ನು ಮುಂದೆ ಸರ್ಕಾರಿ ಭೂಮಿಯ ಮೇಲಿನ ಯಾವುದೇ ಹಕ್ಕುಗಳ ಪ್ರತಿಪಾದನೆಯನ್ನು ಕಲೆಕ್ಟರ್‌ಗಿಂತ ಹೆಚ್ಚಿನ ಶ್ರೇಣಿಯ ಅಧಿಕಾರಿಯೊಬ್ಬರು ಕೂಲಂಕುಶವಾಗಿ ಪರಿಶೀಲಿಸಬೇಕಾಗುತ್ತದೆ. ಜೊತೆಗೆ ವಕ್ಫ್ ನಿರ್ಧಾರಗಳ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಇದೇ ಮೊದಲ ಬಾರಿ ನೇರ ಅವಕಾಶ ಕಲ್ಪಿಸಲಾಗಿದೆ. ಈ ಕಾನೂನಾತ್ಮಕ ಸುಧಾರಣೆಗಳೊಂದಿಗೆ ಜೊತೆಗೆ ಸಮಗ್ರ ಡಿಜಿಟಲೀಕರಣ ಪ್ರಕ್ರಿಯೆಗಳೂ ಜೊತೆ ಜೊತೆಗೆ ನಡೆಯುತ್ತಿವೆ.

<><><><>

ಮಹಾಲಯ ಅಮಾವಾಸ್ಯೆ ಸಂದರ್ಭದಲ್ಲಿಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಶುಭ ಕೋರಿದ್ದಾರೆ. ತಾಯಿ ದುರ್ಗಾದೇವಿಯ ಆಶೀರ್ವಾದ ಸಮಾಜದಲ್ಲಿ ಸಂತೋಷ, ಕರುಣೆ ಮತ್ತು

ಹೊಸ ಭರವಸೆಯನ್ನು ತರಲಿ ಎಂದು ಸಾಮಾಜಿಕ ಮಾಧ್ಯಮ ಸಂದೇಶದ ಮೂಲಕ ಹಾರೈಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಈ ವಿಶೇಷ ಸಂದರ್ಭದಲ್ಲಿ ಜನತೆಗೆ ಶುಭ ಹಾರೈಸಿದ್ದು, ಮಹಾಲಯ ಪಿತೃ ಪಕ್ಷದ ಅಂತ್ಯ ಹಾಗೂ ದೇವಿ ಪಕ್ಷದ ಅರಂಭವನ್ನು ಸೂಚಿಸುತ್ತದೆ. ಆ ಮೂಲಕ ತಾಯಿ ದುರ್ಗೆಯ ಆಗಮನದ ಸೂಚಕವಾಗಿದೆ. ದೇವಿಯ ಕೃಪಾ ಕಟಾಕ್ಷದಿಂದ ಎಲ್ಲರ ಬಾಳಿನಲ್ಲಿ ಸುಖ, ಸಂತೋಷ ಮತ್ತು ಸಮೃದ್ಧಿ ನೆಲೆಸಲಿ ಎಂದು ಹಾರೈಸಿದ್ದಾರೆ.

<><><>

ಯುಎಇಯ ಶಾರ್ಜಾ ಕರಾವಳಿಯಲ್ಲಿ ಕಚ್ಚಾತೈಲ ಹಡಗೊಂದರ ಮೇಲೆ ನಡೆದ ಡ್ರೋನ್ ದಾಳಿ ಬಳಿಕ ಪನಾಮ ಧ್ವಜವನ್ನು ಹೊಂದಿರುವ ಆ ಹಡಗಿನಲ್ಲಿದ್ದ ಎಲ್ಲಾ ೨೨ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಖಚಿತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಪರಿಸ್ಥಿತಿಯ ಮೇಲೆ ಸೂಕ್ಷ್ಮ ಗಮನವಿರಿಸಲಾಗಿದ್ದು, ಭಾರತೀಯ ಸಿಬ್ಬಂದಿಯ ಸುರಕ್ಷತೆ ಖಚಿತಪಡಿಸಲು ಅಧಿಕಾರಿಗಳು ಹಡಗು ನಿರ್ವಹಣಾ ಕಂಪನಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ ಎಂದು ತಿಳಿಸಿದ್ದಾರೆ.

<><><>

ಅಹಮದಾಬಾದ್‌ನಲ್ಲಿ ಇದೇ ೧೨ರಂದು ‘ಬ್ರಿಕ್ಸ್ ಸಾಂಪ್ರದಾಯಿಕ ಮತ್ತು ದೇಶೀಯ ಕ್ರೀಡೆಗಳ ಪ್ರದರ್ಶನ ಪಂದ್ಯಾವಳಿ ೨೦೨೬’ ಅನ್ನು ಆಯೋಜಿಸಲಾಗಿದ್ದು, ಕ್ರೀಡಾಕೂಟವನ್ನು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯಾ ಉದ್ಘಾಟಿಸಲಿದ್ದಾರೆ. ಭಾರತದ ಬ್ರಿಕ್ಸ್ ಅಧ್ಯಕ್ಷತೆಯಡಿಯಲ್ಲಿ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಗುಜರಾತ್ ಸರ್ಕಾರದ ಸಹಯೋಗದೊಂದಿಗೆ ಕ್ರೀಡಾಕೂಟವನ್ನು ಆಯೋಜಿಸುತ್ತಿದೆ. ಈ ಪಂದ್ಯಾವಳಿಯಲ್ಲಿ ತಮ್ಮ ಸಾಂಪ್ರದಾಯಿಕ ಮತ್ತು ದೇಶೀಯ ಕ್ರೀಡಾ ಪದ್ಧತಿಗಳನ್ನು ಪ್ರದರ್ಶಿಸಲು ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಹಾಗೂ ಸಹಭಾಗಿ ದೇಶಗಳ ನಿಯೋಗಗಳು ಭಾಗವಹಿಸಲಿವೆ. ಕ್ರೀಡೆಯ ಮೂಲಕ ಸಾಂಸ್ಕೃತಿಕ ವಿನಿಮಯ, ಪರಂಪರೆಯ ಸಂರಕ್ಷಣೆ ಮತ್ತು ಜನರ ನಡುವಿನ ಸಹಕಾರವನ್ನು ಉತ್ತೇಜಿಸುವುದು ಕ್ರೀಡಾಕೂಟದ ಮುಖ್ಯ ಉದ್ದೇಶವಾಗಿದೆ ಎಂದು ಸಚಿವಾಲಯ ತಿಳಿಸಿದೆ. ಈ ಕಾರ್ಯಕ್ರಮದ ಜೊತೆಗೆ ಆಗಮಿಸುವ ವಿದೇಶಿ ನಿಯೋಗಗಳೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲು ಯೋಜಿಸಲಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>